# ಆತ್ಮನೋ ಮೋಕ್ಷಾರ್ಥಂ ಜಗದ್ಧಿತಾಯ ಚ

**ಸ್ವಾ**ಮಿ ವಿವೇಕಾನಂದರು ತಮ್ಮ ಆಳ ಅಧ್ಯಯನದ ಮೂಲಕವೂ ಸುದೀರ್ಘ ಚಿಂತನೆಯ ಮೂಲಕವೂ ಅಪಾರ ಅನುಭವಗಳ ಮೂಲಕವೂ ಅಗಾಧ ಅಂತರ್ದೃಷ್ಟಿಯ ಮೂಲಕವೂ ಜಗತ್ತಿನ ಎಲ್ಲರ ಆದರ್ಶವಾಗಿ **ಆತ್ಮನೋ ಮೋಕ್ಷಾರ್ಥಂ ಜಗದ್ಧಿತಾಯ ಚ**—"ಸ್ವಂತ ಮುಕ್ತಿಗಾಗಿ ಸಾಧನೆ ಮಾಡುವುದರ ಜೊತೆಜೊತೆಗೇ ಜಗತ್ತಿನ ಹಿತಕ್ಕಾಗಿಯೂ ದುಡಿಯಬೇಕು" —ಎಂಬ ಮಹಾಮಂತ್ರವನ್ನು ನಮಗೆ ನೀಡಿರುವರು. ಈ ಎರಡೂ ಆದರ್ಶಗಳು ಪರಸ್ಪರ ಪೂರಕವಾಗಿರಬೇಕು. ಸ್ವಂತ ಮುಕ್ತಿಯ ಸಾಧನೆಯು ವ್ಯಕ್ತಿಯ ಪ್ರಜ್ಞೆಯನ್ನು ವಿಶಾಲಗೊಳಿಸಿ ಅವನಲ್ಲಿ ಇತರರ ಬಗ್ಗೆ ಕಳಕಳಿ ಅಧಿಕವಾಗುತ್ತ ಹೋಗಿ, ಜಗದ್ಧಿತವನ್ನು ಅವನು ಸ್ವಾಭಾವಿಕವಾಗಿಯೇ ಮಾಡುವಂತಾಗಬೇಕು. ನಿಃಸ್ವಾರ್ಥ ಭಾವದಿಂದ ಜಗದ್ಧಿತ ಕಾರ್ಯವನ್ನು ವ್ಯಕ್ತಿ ಮಾಡುತ್ತ ಹೋದಂತೆಲ್ಲ ಅವನ ಹೃದಯ ಪವಿತ್ರಗೊಳ್ಳುತ್ತದೆ ಮತ್ತು ಇದರ ಮೂಲಕ ಅವನ ಆಧ್ಯಾತ್ಮಿಕ ಹಂಬಲವೂ ವೃದ್ಧಿಗೊಂಡು ಸಾಧನೆಗೆ ಪುಷ್ಟಿ ದೊರೆಯುತ್ತದೆ.

ಆಧುನಿಕ ಸಮಾಜದಲ್ಲಿ ಸಾಮೂಹಿಕತೆ ಹೆಚ್ಚು ಅಧಿಕವೂ ಅಗತ್ಯವೂ ಆಗುತ್ತಿದೆ. ಪರಸ್ಪರ ಅವಲಂಬನೆಯ ಅನಿವಾರ್ಯತೆ ಹೆಚ್ಚುತ್ತಿರುವುದರಿಂದ ನಮ್ಮ ಜೀವನವಿಧಾನವೂ ಬದಲಾಗುವುದು ಸ್ವಾಭಾವಿಕವಾಗಿದೆ. ಇನ್ನೊಂದು ದೃಷ್ಟಿಯಿಂದ ನೋಡಿದರೆ ಸಾಮೂಹಿಕತೆಯ ವೃದ್ಧಿಯೊಂದಿಗೆ ವೈಯಕ್ತಿಕ ಪ್ರಜ್ಞೆಯೂ ಅಧಿಕವಾಗುತ್ತಿದೆ. ತನ್ನ ವ್ಯಕ್ತಿವೈಶಿಷ್ಟ್ಯವನ್ನು ಕಳೆದುಕೊಳ್ಳದೆ ವ್ಯಕ್ತಿಯು ತಾನೇತಾನಾಗಿರಲೂ ಬಯಸುತ್ತಾನೆ. ಇದರಿಂದಾಗಿ ತಾನು ತನ್ನದು ಎಂಬ ಭಾವವು ಅವನನ್ನು ಸಾಮೂಹಿಕತೆಯ ಕಡಲಲ್ಲಿ ಕರಗಿಹೋಗಲು ಬಿಡುತ್ತಿಲ್ಲ. ಒಬ್ಬ ವ್ಯಕ್ತಿಯಾಗಿಯೂ ಅವನು ತನ್ನ ಇರವನ್ನು ಕಾಪಾಡಿಕೊಳ್ಳಬೇಕು ಮತ್ತು ಆಧುನಿಕತೆಯ ಆವಶ್ಯಕತೆಗೆ ಅನುಗುಣವಾಗಿ ಸಮೂಹದೊಂದಿಗೂ ಅವನು ಒಂದಾಗಬೇಕು. ಆದ್ದರಿಂದ ಅವನು ವೈಯಕ್ತಿಕ ಪ್ರಜ್ಞೆ ಮತ್ತು ಸಾಮೂಹಿಕ ಪ್ರಜ್ಞೆ ಇವೆರಡನ್ನೂ ಉಳಿಸಿಕೊಳ್ಳಬೇಕಾಗಿದೆ. ಇದಕ್ಕೆ ಸಾಧನವಾಗಿ ಸ್ವಾಮಿ ವಿವೇಕಾನಂದರ ಈ ಮಂತ್ರವು, ಸರಿಯಾದ ರೀತಿಯಲ್ಲಿ ಅನುಸರಿಸಿದಲ್ಲಿ, ಪ್ರತಿಯೊಬ್ಬ ವ್ಯಕ್ತಿಯಲ್ಲಿಯೂ ಪ್ರಧಾನ ಪಾತ್ರ ವಹಿಸಬಲ್ಲದು. ಸ್ವಾಮೀಜಿಯವರು ವ್ಯಕ್ತಿಯ ಆಂತರಿಕ ತುಡಿತಕ್ಕೆ ಆದರ್ಶಪೂರ್ಣವಾದ ಅಭಿವ್ಯಕ್ತಿಯನ್ನು ನೀಡಿದ್ದಾರೆ. ವಿವಿಧ ದೃಷ್ಟಿಕೋನಗಳಿಂದ ಈ ಮಂತ್ರವನ್ನು ಅರ್ಥ ಮಾಡಿಕೊಳ್ಳಲು ಪ್ರಯತ್ನಿಸೋಣ.

**ಧರ್ಮದ ಎರಡು ಮುಖಗಳು**

ಧರ್ಮದಲ್ಲಿ ಎರಡು ಮುಖಗಳಿವೆ : ಸಾಮೂಹಿಕ ಮತ್ತು ವೈಯಕ್ತಿಕ. ಕ್ರಿಯಾವಿಧಿಗಳು, ಉತ್ಸವಗಳು, ಹಬ್ಬಗಳು, ದೇವಾಲಯ ಚರ್ಚು ಮುಂತಾದವುಗಳು, ಸಭೆ ಸಮಾರಂಭಗಳು, ಶಾಸ್ತ್ರಗ್ರಂಥಗಳು, ಧಾರ್ಮಿಕ ಆಚರಣೆಗಳು ಇತ್ಯಾದಿಗಳು ಸಾಮೂಹಿಕ ಧರ್ಮದ ಅಂಶಗಳು. ಇವು ಜನಸಾಮಾನ್ಯರಲ್ಲಿ ಧಾರ್ಮಿಕ ಪ್ರಜ್ಞೆಯನ್ನು ಉಳಿಸಿ ಬೆಳೆಸಲು ಆವಶ್ಯಕ. ವ್ಯಕ್ತಿಯು ಸಮಾಜದಿಂದ ದೂರವಿದ್ದು, ತನ್ನ ಮನೆಯಲ್ಲೇ ಆಗಲಿ ಅಥವಾ ಅರಣ್ಯ ಪರ್ವತ ಗುಹೆಗಳಲ್ಲಾಗಲಿ, ತನ್ನ ಮುಕ್ತಿಗೋಸ್ಕರ ಇಲ್ಲವೇ ಭಗವತ್ಸಾಕ್ಷಾತ್ಕಾರಕ್ಕಾಗಿ ಸಾಧನೆಯನ್ನು ನಡೆಸುವುದು ವೈಯಕ್ತಿಕ ಧರ್ಮ. ಈ ಎರಡೂ ಧರ್ಮಗಳು ಸಾಮಾನ್ಯವಾಗಿ ಪ್ರತ್ಯೇಕವಾಗಿರುತ್ತವೆ. ಜನಸಾಮಾನ್ಯರು ಸಾಮೂಹಿಕ ಧರ್ಮದಲ್ಲಿ ನಿರತರಾಗಿರುತ್ತಾರೆ ಮತ್ತು ಕೆಲವು ವ್ಯಕ್ತಿಗಳು ಮಾತ್ರ ಸಮಾಜದಿಂದ ದೂರವಿದ್ದು ಸ್ವಂತ ಆಧ್ಯಾತ್ಮಿಕ ಉನ್ನತಿಗಾಗಿ ಸಾಧನೆ ಮಾಡುತ್ತಿರುತ್ತಾರೆ.

ಸಾಮೂಹಿಕ ಧರ್ಮದಲ್ಲಿ ಆಧ್ಯಾತ್ಮಿಕ ಆದರ್ಶ ಇಲ್ಲದಿದ್ದರೆ ಅದು ಕೇವಲ ಗೊಡ್ಡು ಆಚರಣೆಯಾಗಿ ಉಳಿಯುತ್ತದೆ. ಜೀವನಪರ್ಯಂತ ಅವುಗಳನ್ನು ಅನುಸರಿಸುತ್ತಿದ್ದರೂ ವ್ಯಕ್ತಿಯಲ್ಲಿ ಯಾವ ಬದಲಾವಣೆಯೂ ಉಂಟಾಗುವುದಿಲ್ಲ. ಜನರು ತಾವು ಅವನ್ನು ಏತಕ್ಕೆ ಅನುಸರಿಸುತ್ತೇವೆಂದೂ ಪ್ರಶ್ನಿಸಿಕೊಳ್ಳುವುದಿಲ್ಲ. ಆಧ್ಯಾತ್ಮಿಕ ಆದರ್ಶದ ಕೊರತೆಯಿಂದಾಗಿ ಈ ಆಚರಣೆಗಳು, ಅನೇಕ ಮೂಢನಂಬಿಕೆಗಳ ಜೊತೆಗೆ, ಅನಾವಶ್ಯಕವಾಗಿ ಬೆಳೆಯುತ್ತ ಹೋಗುತ್ತವೆ. ಮತ್ತೆ ಈ ಆಚರಣೆಗಳೇ ಪ್ರಧಾನವಾಗಿ, ಅವೇ ಒಂದು ಜನಾಂಗದ ಧರ್ಮಪ್ರಜ್ಞೆಯ ಜೀವಾಳವಾಗಿ, ಕೋಮುಗಲಭೆ ಇತ್ಯಾದಿಗಳಿಗೂ ಕಾರಣವಾಗುತ್ತವೆ. ಧರ್ಮದ ಹೆಸರಿನಲ್ಲಿ ನಡೆಯುವ ಎಲ್ಲ ಯುದ್ಧಗಳಿಗೂ ರಕ್ತಪಾತಗಳಿಗೂ ಈ ಸಾಮೂಹಿಕ ಧರ್ಮವೇ ಕಾರಣ. ವೈಯಕ್ತಿಕ ಧರ್ಮದಲ್ಲಿರುವ ಆಧ್ಯಾತ್ಮಿಕ ಆದರ್ಶವು ಸಾಮೂಹಿಕ ಧರ್ಮದೊಡನೆ ಸೇರಿಕೊಳ್ಳಬೇಕು.

> ತನ್ನ ಸ್ವಂತ ಮೋಕ್ಷವನ್ನು ಆಶಿಸುವುದೂ ಕೂಡ ತಪ್ಪು. ಪರರಿಗೆ ತನ್ನ ಸರ್ವಸ್ವವನ್ನೂ ಯಾರು ತ್ಯಾಗ ಮಾಡುವರೊ ಅವರಿಗೆ ಮಾತ್ರ ಮುಕ್ತಿ. —ಸ್ವಾಮಿ ವಿವೇಕಾನಂದ.

ಹಾಗೆಯೇ ವೈಯಕ್ತಿಕ ಧರ್ಮದಲ್ಲಿ ಸಾಮೂಹಿಕ ಪ್ರಜ್ಞೆ ಮೈತಳೆಯಬೇಕು. ಇಲ್ಲದಿದ್ದರೆ ವೈಯಕ್ತಿಕ ಧರ್ಮದಲ್ಲಿ ನಿರತನಾದ ವ್ಯಕ್ತಿಯು ಸ್ವಾರ್ಥಿಯಾಗುವ, ಸ್ವಕೇಂದ್ರಿತನಾಗುವ ಸಂಭವವುಂಟು. ಇಲ್ಲಿ ಸ್ವಾರ್ಥವೆಂದರೆ ಹಣ ಮುಂತಾದ ಭೌತಿಕ ವಿಷಯದಲ್ಲಿ ಅಲ್ಲದಿರಬಹುದು. ತನ್ನ ಸುಖದುಃಖಗಳ ವಿಷಯದಲ್ಲಿಯೇ ಅವನ ಗಮನವೆಲ್ಲ ಕೇಂದ್ರೀಕೃತವಾಗಬಹುದು. ಅವನು ಸರಳ, ವೈರಾಗ್ಯಪೂರ್ಣ ಜೀವನ ನಡೆಸುತ್ತಿದ್ದರೂ ಇತರರ ಬಗ್ಗೆ ಕಳಕಳಿ

ಇಲ್ಲದೆ. ತನ್ನದೇ ವೈಯಕ್ತಿಕ ಲೋಕದಲ್ಲಿ ಬದ್ಧನಾಗಿರಬಹುದು. ಆದ್ದರಿಂದ ಅವನು ಎಷ್ಟೇ ಸಾಧನೆ ಮಾಡುತ್ತಿದ್ದರೂ ಪ್ರಜ್ಞಾ ವೈಶಾಲ್ಯದ ಕೊರತೆಯಿಂದಾಗಿ ತನ್ನ ಮುಕ್ತಿಗೆ ತಾನೇ ತಡೆಯಾಗಬಹುದು. ಅಂತಹ ಸಾಧಕರಲ್ಲಿ ಸಾಮಾನ್ಯವಾಗಿ ಸಿಡುಕು ಸ್ವಭಾವವಿರುತ್ತದೆ. ತಮ್ಮ ಸಾಧನೆಗೆ ಸ್ವಲ್ಪ ಅಡಚಣೆಯುಂಟಾದರೂ, ತಮ್ಮ ವೈಯಕ್ತಿಕ ಬೇಕುಬೇಡಗಳಿಗೆ ಸ್ವಲ್ಪ ಅಡಚಣೆಯುಂಟಾದರೂ ಅವರು ಸಿಡಿಮಿಡಿಗುಟ್ಟುತ್ತಾರೆ. ಇತರರು ಅವರಂತೆ ಸಾಧನಾ ಜೀವನ ನಡೆಸುತ್ತಿಲ್ಲದಿರುವುದು ಅವರಲ್ಲಿ ತೀವ್ರ ಅಸಮಾಧಾನವನ್ನು ಉಂಟುಮಾಡುತ್ತದೆ. ಮತ್ತು ಈ ಅಸಮಾಧಾನವೇ ಅವರ ಆಧ್ಯಾತ್ಮಿಕ ಪ್ರಗತಿಗೆ ಬಾಧಕವಾಗುತ್ತದೆ. ತಮ್ಮ ವೈಯಕ್ತಿಕ ವಿಷಯಕ್ಕೆ ಸಂಬಂಧಪಟ್ಟಂತೆ ಇತರರಿಂದ ಸ್ವಲ್ಪ ತೊಂದರೆ ಉಂಟಾದರೂ ಕೋಪದಿಂದ ಶಾಪ ಕೊಡುವ ಋಷಿಗಳ ವಿಷಯವನ್ನು ನಾವು ಪುರಾಣಗಳಲ್ಲಿ ಓದುತ್ತೇವೆ. ಅವರು ಸಮಾಜದಿಂದ ದೂರವಾಗಿ ಕಾಡಿನಲ್ಲೋ ಪರ್ವತ ಪ್ರದೇಶದಲ್ಲೋ ತಪಸ್ಸನ್ನು ಆಚರಿಸುತ್ತಿದ್ದುದರಿಂದ, ಪ್ರಜ್ಞಾ ವೈಶಾಲ್ಯದ ಸಾಧ್ಯತೆಯನ್ನು ಕಳೆದುಕೊಂಡು ಆ ರೀತಿ ವರ್ತಿಸುತ್ತಿದ್ದಿರಬಹುದು. ಈ ಕಾರಣದಿಂದಾಗಿಯೇ ಸ್ವಾಮಿ ವಿವೇಕಾನಂದರು, ಕೇವಲ ವೈಯಕ್ತಿಕ ಮುಕ್ತಿಯನ್ನು ಬಯಸುವರು ನರಕಕ್ಕೇ ಹೋಗುತ್ತಾರೆ ಎಂದು ಎಚ್ಚರಿಕೆಯನ್ನು ನೀಡುತ್ತಾರೆ. ಏಕೆಂದರೆ ಮುಕ್ತಿಗೆ ಪ್ರಜ್ಞಾವೈಶಾಲ್ಯ ಒಂದು ಅತ್ಯಾವಶ್ಯಕ ಗುಣ.

ಆದ್ದರಿಂದಲೇ ಸ್ವಾಮೀಜಿ **ಆತ್ಮನೋ ಮೋಕ್ಷಾರ್ಥಂ ಜಗದ್ಧಿತಾಯ ಚ** ಎಂಬ ಆದರ್ಶವನ್ನು ನಮ್ಮ ಮುಂದೆ ಇಟ್ಟರು. ಪ್ರತಿಯೊಬ್ಬನ ಜೀವನದಲ್ಲಿಯೂ ವೈಯಕ್ತಿಕ ಮತ್ತು ಸಾಮೂಹಿಕ ಧರ್ಮಗಳೆರಡೂ ಸಮನ್ವಯಗೊಳ್ಳಬೇಕೆಂಬುದು ಅವರ ಉದ್ದೇಶ.

### ಕೇಂದ್ರಾಭಿಕರ್ಷಕ ಮತ್ತು ಕೇಂದ್ರಾಪಕರ್ಷಕ ಶಕ್ತಿ

ಈಗ ಇನ್ನೊಂದು ರೀತಿಯಲ್ಲಿ ಈ ಮಂತ್ರವನ್ನು ಅರ್ಥೈಸಲು ಪ್ರಯತ್ನಿಸೋಣ. ವಿವೇಕಾನಂದರೆ ಹೇಳುವಂತೆ ಪ್ರತಿಯೊಬ್ಬ ವ್ಯಕ್ತಿಯಲ್ಲೂ ಎರಡು ಶಕ್ತಿಗಳು ಕೆಲಸ ಮಾಡುತ್ತಿವೆ: ವ್ಯಕ್ತಿತ್ವ ಕೇಂದ್ರದಿಂದ ದೂರಹೋಗುವ ಕೇಂದ್ರಾಪಕರ್ಷಕ ಶಕ್ತಿ ಮತ್ತು ಕೇಂದ್ರದ ಕಡೆಗೆ ಹೋಗುವ ಕೇಂದ್ರಾಭಿಕರ್ಷಕ ಶಕ್ತಿ. ಕೇಂದ್ರಾಪಕರ್ಷಕ ಶಕ್ತಿಯು ಸಾಮಾನ್ಯವಾಗಿ ವ್ಯಕ್ತಿಯನ್ನು ಬಹಿರ್ಮುಖನನ್ನಾಗಿ ಮಾಡಿ, ಅವನು ಬಾಹ್ಯ ಜನರೊಡನೆ, ಸಂಘ ಸಂಸ್ಥೆಗಳೊಡನೆ ಒಂದಾಗುವಂತೆಯೂ ಅನಾವಶ್ಯಕ ಚಟುವಟಿಕೆಗಳಲ್ಲಿ ಮತ್ತು ಮಾತುಕತೆಗಳಲ್ಲಿ ತೊಡಗುವಂತೆಯೂ ಪ್ರೇರೇಪಿಸುತ್ತದೆ. ಇದರಿಂದಾಗಿ ಅವನ ಎಷ್ಟೋ ಶಕ್ತಿ ಮತ್ತು ಸಮಯ ವ್ಯರ್ಥವಾಗಿ ಹೋಗುತ್ತವೆ. ಇದೇ ಶಕ್ತಿಯನ್ನು ಅವನು ವಿಚಾರಪೂರ್ಣವಾಗಿ ರಚನಾತ್ಮಕವಾಗಿ ಬಳಸಬೇಕು. ಈ ಪ್ರವೃತ್ತಿಯನ್ನು ಜಗದ್ಧಿತ ಕಾರ್ಯದಲ್ಲಿ ತೊಡಗಿಸಿದರೆ ಸಮಾಜ ಎಷ್ಟೋ ಮೇಲಾಗುತ್ತದೆ ಮತ್ತು ವೈಯಕ್ತಿಕ ಉನ್ನತಿಯೂ ಸಾಧಿತವಾಗುತ್ತದೆ.

ಕೇಂದ್ರಾಭಿಕರ್ಷಕ ಶಕ್ತಿಯು ಸಾಮಾನ್ಯವಾಗಿ ಸ್ವಾರ್ಥ ಸಾಧನೆಯಲ್ಲಿ ವ್ಯರ್ಥವಾಗುತ್ತದೆ. ಇದರ ಪ್ರಭಾವದಿಂದಾಗಿ ವ್ಯಕ್ತಿಯ ಗಮನವೆಲ್ಲ ತನ್ನ ಕಡೆಗೇ ಇದ್ದು, ಎಲ್ಲವನ್ನೂ ತನ್ನೆಡೆಗೇ ಸೆಳೆದುಕೊಳ್ಳಲು ಪ್ರಯತ್ನಿಸುತ್ತಾನೆ. ಇದರ ಬದಲು ಅವನು ಈ ಶಕ್ತಿಯನ್ನು ತನ್ನ ಅಂತರಂಗದ ಕಡೆಗೆ ಹರಿಸಲು ಪ್ರಯತ್ನಿಸಬೇಕು. ತನ್ನೆಡೆಗೆ ಎಲ್ಲವನ್ನೂ ಸೆಳೆದುಕೊಳ್ಳುವ ಬದಲು ತನ್ನನ್ನೇ ಒಳಸೆಳೆದುಕೊಳ್ಳಬೇಕು—**ಆವೃತ್ತ ಚಕ್ಷು** ಆಗಬೇಕು. ಈ ರೀತಿ ಅವನು ತನ್ನನ್ನು ತಾನು ಅರಿಯುವ ಪ್ರಯತ್ನ ಮಾಡಿದಾಗ, ತನ್ನ ಗುಣದೋಷಗಳನ್ನೂ ತನ್ನ ದೌರ್ಬಲ್ಯಪ್ರಾಬಲ್ಯಗಳನ್ನೂ ನಿಷ್ಪಕ್ಷಪಾತವಾಗಿ ಅರಿಯಲು ಪ್ರಯತ್ನಿಸಿದಾಗ ತನ್ನನ್ನು ತಾನು ತಿದ್ದಿಕೊಂಡು ವೈಯಕ್ತಿಕ ಉನ್ನತಿಯನ್ನು ಸಾಧಿಸಬಹುದು. ಅಂದರೆ ನಮ್ಮಲ್ಲಿರುವ ಈ ಎರಡೂ ಶಕ್ತಿಗಳನ್ನೂ ಯಥಾರ್ಥವಾಗಿ ಬಳಸಿಕೊಂಡು ಆತ್ಮೋನ್ನತಿ ಮತ್ತು ಜಗದ್ಧಿತ ಎರಡೂ ಸಾಧಿತವಾಗುವಂತೆ ನೋಡಿಕೊಳ್ಳಬೇಕು. ಆದ್ದರಿಂದಲೇ **ಆತ್ಮನೋ ಮೋಕ್ಷಾರ್ಥಂ ಜಗದ್ಧಿತಾಯ ಚ** ಎಂಬ ಮಂತ್ರವನ್ನು ಸ್ವಾಮೀಜಿ ನಮಗೆ ನೀಡಿರುವರು.

### ಅಭ್ಯುದಯ ಮತ್ತು ನಿಃಶ್ರೇಯಸ

ಇನ್ನೊಂದು ದೃಷ್ಟಿಯಿಂದ ನೋಡುವುದಾದರೆ ಆತ್ಮಮುಕ್ತಿ ಮತ್ತು ಜಗದ್ಧಿತ ಕ್ರಮವಾಗಿ ನಿಃಶ್ರೇಯಸ್ ಮತ್ತು ಅಭ್ಯುದಯಗಳನ್ನು ಪ್ರತಿನಿಧಿಸುತ್ತವೆ ಎನ್ನಬಹುದು. ನಿಃಶ್ರೇಯಸ ಎಂದರೆ ಆಧ್ಯಾತ್ಮಿಕ ಮತ್ತು ನೈತಿಕ ಉನ್ನತಿ. ಅಭ್ಯುದಯವೆಂದರೆ ಲೌಕಿಕ ಉನ್ನತಿ—ಆರ್ಥಿಕ, ಸಾಮಾಜಿಕ, ರಾಜಕೀಯ ಮುಂತಾದವುಗಳ ಅಭಿವೃದ್ಧಿ. ಒಟ್ಟು ಸಮಾಜದ ದೃಷ್ಟಿಯಿಂದ ಇವೆರಡೂ ಆವಶ್ಯಕ. ಕೇವಲ ನಿಃಶ್ರೇಯಸ್ಸಿಗೆ ಪ್ರಾಧಾನ್ಯ ನೀಡಿ ಅಭ್ಯುದಯವನ್ನು ಕಡೆಗಣಿಸಿದರೆ ಸಮಾಜ ಕ್ರಮೇಣ ಅವನತಿಯನ್ನು ಹೊಂದಿ ನಿಃಶ್ರೇಯಸ್ಸಿನಿಂದಲೂ ಜನರು ವಂಚಿತರಾಗಬೇಕಾದ ಪರಿಸ್ಥಿತಿ ಉಂಟಾಗುತ್ತದೆ. ಬೌದ್ಧಧರ್ಮವು ತ್ಯಾಗದ ಆದರ್ಶವನ್ನು ಎಲ್ಲರಿಗೂ ಬೋಧಿಸಿದುದರಿಂದಲೇ ಸಮಾಜ ಮತ್ತು ಬೌದ್ಧಧರ್ಮ ಎರಡೂ ಅವನತಿ ಹೊಂದಿದವು ಎಂದು ಸ್ವಾಮೀಜಿ ಅಭಿಪ್ರಾಯ ಪಡುತ್ತಾರೆ. ಹಾಗೆಯೇ ನಿಃಶ್ರೇಯಸ್ಸನ್ನು ಕಡೆಗಣಿಸಿ ಕೇವಲ ಅಭ್ಯುದಯಕ್ಕೆ ಪ್ರಾಧಾನ್ಯ ನೀಡಿದರೆ, ಆಧ್ಯಾತ್ಮಿಕ ಮತ್ತು ನೈತಿಕ ತಳಹದಿ ಇಲ್ಲದೆ, ಲೌಕಿಕ ಪ್ರಗತಿಯನ್ನು ಬಹುಕಾಲ ಉಳಿಸಿಕೊಳ್ಳಲಾಗುವುದಿಲ್ಲ, ಸಮಾಜ ಅಧೋಗತಿಗೆ ಇಳಿಯುತ್ತದೆ. ಆದ್ದರಿಂದ ಈ ಎರಡೂ ಆದರ್ಶಗಳ ಸಮನ್ವಯ ಅಗತ್ಯ. ಒಂದಕ್ಕೊಂದು ಪೂರಕವಾಗಿಯೂ ಒಂದನ್ನೊಂದು ನಿಗ್ರಹಿಸುತ್ತಲೂ ಇವೆರಡರಲ್ಲಿಯೂ ಸಮಾಜ ಮುಂದುವರಿಯಬೇಕು.

> **ನಮ್ಮಲ್ಲಿ ಉಚ್ಚತಮ ಆದರ್ಶಕ್ಕೆ ಸಿದ್ಧರಿಲ್ಲದ ಅನೇಕರಿಗೆ ಅವರ ಅಗತ್ಯಕ್ಕೆ ತಕ್ಕ ಸ್ವಲ್ಪ ಮಟ್ಟಿನ ಪ್ರಾಪಂಚಿಕತೆ ಕಲ್ಯಾಣಕಾರಿ**
> —ಸ್ವಾಮಿ ವಿವೇಕಾನಂದ

ಸ್ವಾಮಿ ವಿವೇಕಾನಂದರ ಅಭಿಪ್ರಾಯದಂತೆ ಪೌರಸ್ತ್ಯ ಸಂಸ್ಕೃತಿ ನಿಃಶ್ರೇಯಸ್ಸನ್ನೂ ಪಾಶ್ಚಾತ್ಯ ಸಂಸ್ಕೃತಿ ಅಭ್ಯುದಯವನ್ನೂ ಪ್ರತಿನಿಧಿಸುತ್ತವೆ. ಅವರು ಹೇಳುತ್ತಾರೆ: "ಯೂರೋಪ್ ಯಾವಾಗಲೂ

ಸಾಮಾಜಿಕ ಶಕ್ತಿಯ ಮತ್ತು ಏಶಿಯಾ ಯಾವಾಗಲೂ ಆಧ್ಯಾತ್ಮಿಕ ಶಕ್ತಿಯ ಮೂಲಸ್ಥಾನಗಳಾಗಿವೆ. ಜಗತ್ತಿನ ಇಡೀ ಇತಿಹಾಸ ವೆಂದರೆ ಈ ಎರಡು ಶಕ್ತಿಗಳ ವಿವಿಧ ಬಗೆಯ ಸಂಮಿಶ್ರವಾದ ಕಥೆಯೇ ಆಗಿದೆ." (ಸ್ವಾಮಿ ವಿವೇಕಾನಂದ ಕೃತಿಶ್ರೇಣಿ, ೪.೨೮೦). ರೋಮನ್ನರಲ್ಲಿಯೂ ಇದೇ ಅಭಿಪ್ರಾಯ ಬರುವಂತಹ ಹೇಳಿಕೆಯೊಂದಿತ್ತು: Out of the East light, out of the West law (ಪೂರ್ವದಿಂದ ಆಧ್ಯಾತ್ಮಿಕ ಬೆಳಕೂ ಪಶ್ಚಿಮದಿಂದ ಲೌಕಿಕ ನೀತಿನಿಯಮಗಳೂ ಬರುತ್ತವೆ). **ಆತ್ಮನೋ ಮೋಕ್ಷಾರ್ಥಂ ಜಗದ್ಧಿತಾಯ ಚ** ಎಂಬ ಮಂತ್ರದ ಮೂಲಕ ಸ್ವಾಮೀಜಿ ಪೂರ್ವ ಮತ್ತು ಪಶ್ಚಿಮಗಳ ಈ ಎರಡು ಆದರ್ಶಗಳ ಸುಂದರ ಸಮ್ಮಿಲನವನ್ನು ಬಯಸುತ್ತಾರೆ ಎನ್ನಬಹುದು. ಅವರ ಹೆಬ್ಬಯಕೆ ಇದಾಗಿತ್ತು : "ಸಮಾನತೆ, ಸ್ವಾತಂತ್ರ್ಯ, ಕ್ರಿಯೆ, ಶಕ್ತಿ ಇವುಗಳಲ್ಲಿ ಪಾಶ್ಚಾತ್ಯರನ್ನು ಕೂಡ ಮೀರಿಸಿ, ಅದೇ ಸಂದರ್ಭದಲ್ಲಿ ಧಾರ್ಮಿಕ ಸಂಸ್ಕೃತಿ ಮತ್ತು ಸ್ವಭಾವಗಳಲ್ಲಿ ನೀವು ಪೂರ್ಣ ಭಾರತೀಯ ರಾಗಬಲ್ಲಿರಾ? ಇದನ್ನೇ ನೆರವೇರಿಸಬೇಕಾಗಿದೆ."

**ಇಡೀ ವಿಶ್ವ ಒಂದು**

ಇನ್ನೂ ಒಂದು ದೃಷ್ಟಿಕೋನದಿಂದಲೂ ನಾವು ಈ ಮಂತ್ರ ವನ್ನು ಅರ್ಥೈಸಬಹುದು. ಸ್ವಾಮಿ ವಿವೇಕಾನಂದರೇ ಹೇಳುವಂತೆ, ಆಧುನಿಕ ವಿಜ್ಞಾನವು ಹಿಂದೆಂದಿಗಿಂತಲೂ ಹೆಚ್ಚು ಸ್ಪಷ್ಟವಾದ ಭಾಷೆಯಲ್ಲಿ ಇಡೀ ವಿಶ್ವದ ಏಕತೆಯನ್ನು ಪ್ರತಿಪಾದಿಸುತ್ತಿರುವುದು. ಈ ವಿಶ್ವದಲ್ಲಿ ಯಾವುದನ್ನೂ ನಾವು ಸಂಪೂರ್ಣ ಪ್ರತ್ಯೇಕವಾಗಿ ಭಾವಿಸಲು ಆಗುವುದಿಲ್ಲ, ಎಲ್ಲವೂ ಒಂದಕ್ಕೊಂದು ಸಂಬಂಧಿಸಿವೆ, ಒಂದನ್ನೊಂದು ಅವಲಂಬಿಸಿವೆ, ಒಂದರೊಳಗೊಂದು ಸೇರಿ ಕೊಂಡಿವೆ. ಇಡೀ ವಿಶ್ವವೇ ಒಂದು. ಇಲ್ಲಿ ಭೌತಿಕವಾಗಿಯೂ ಪ್ರತ್ಯೇಕತೆಯೆಂಬುದು ಇಲ್ಲ. ನಮ್ಮ ದೃಷ್ಟಿಯ ಮಿತಿಯಿಂದಾಗಿ ಎಲ್ಲವೂ ಬೇರೆ ಬೇರೆಯಾಗಿ ಕಾಣುತ್ತಿವೆ. ಇದು ದೃಷ್ಟಿಭೇದವೇ ಹೊರತು ವಸ್ತುಭೇದವಲ್ಲ. ಆದ್ದರಿಂದ ಯಾವುದೇ ಒಂದು ವಸ್ತುವಿಗೆ ಸಂಬಂಧಪಟ್ಟ ಕ್ರಿಯೆ ಇನ್ನೊಂದರ ಮೇಲೆ ಪರಿಣಾಮ ಉಂಟುಮಾಡದೇ ಇರುವುದಿಲ್ಲ. ಹಾಗೆಯೇ ಒಬ್ಬನ ಸುಖದುಃಖ ಗಳು ಇನ್ನೊಬ್ಬನ ಮೇಲೆ ಪರಿಣಾಮ ಬೀರದೆ ಇರುವುದಿಲ್ಲ. ಈ ದೃಷ್ಟಿಯಿಂದ ನೋಡಿದರೆ ಯಾವನೇ ಒಬ್ಬ ವ್ಯಕ್ತಿಯೂ ತಾನೊಬ್ಬನೇ ಸುಖವಾಗಿರುತ್ತೇನೆ, ಉಳಿದವರಿಗೆ ಏನಾದರಾಗಲಿ ಎಂದು ಭಾವಿಸುವಂತಿಲ್ಲ. ಎಪಿಕ್ಟಟಸ್ ಎಂಬ ಗ್ರೀಕ್ ತತ್ತ್ವಜ್ಞಾನಿಯು ಹೇಳುವಂತೆ, "ಇತರರ ಒಳಿತನ್ನು ಉಂಟು ಮಾಡದೆಯೇ ಯಾವನೂ ತನ್ನ ಒಳಿತನ್ನು ಮಾತ್ರ ಸಾಧಿಸಲಾರ." ಇದನ್ನೇ ಸಮರ್ಥಿಸುತ್ತ ಸ್ವಾಮಿ ವಿವೇಕಾನಂದರು ಹೀಗೆ ಹೇಳು ತ್ತಾರೆ: "ವ್ಯಕ್ತಿಯ ಜೀವನ ಪೂರ್ಣದ ಜೀವನವನ್ನು ಅವಲಂಬಿಸಿದೆ, ವ್ಯಕ್ತಿಯ ಸುಖ ಪೂರ್ಣದ ಸುಖವನ್ನು ಅವಲಂಬಿಸಿದೆ. ಪೂರ್ಣದ ಹೊರತಾಗಿ ವ್ಯಕ್ತಿಯ ಅಸ್ತಿತ್ವವನ್ನು ಭಾವಿಸಲಾಗುವುದಿಲ್ಲ. ಇದು ಸನಾತನ ಸತ್ಯ, ಈ ಭದ್ರ ಬಂಡೆಯ ಮೇಲೆಯೇ ಇಡೀ ಜಗತ್ತು ನಿರ್ಮಿತವಾಗಿದೆ (ಕೃತಿಶ್ರೇಣಿ, ೪.೪೮೩)".

ಕ್ವಾಂಟಮ್ ವಿಜ್ಞಾನಿಗಳ ಹೇಳಿಕೆಯನ್ನು ಉದಾಹರಿಸುವುದು ಇಲ್ಲಿ ಸೂಕ್ತವೆನಿಸುವುದು: "ಪ್ರತಿಯೊಂದೂ ನಮಗಾಗಿ ಸೃಷ್ಟಿ ಯಾಗಿರುವುದಿಲ್ಲ, ನಾವು ಕೇವಲ ಫಲಭಾಗಿಗಳಲ್ಲ. ಆದರೆ ವಿಶಾಲ ನಾಟಕದ ನಮ್ರ ಸೇವಕರು ನಾವು, ಮತ್ತು ಅದರ ವಿಸ್ತರಣೆಯಲ್ಲಿ ನಮ್ಮ ಪಾತ್ರದ ಆವಶ್ಯಕತೆಯೂ ಇದೆ."

"ಕ್ವಾಂಟಮ್ ಸಿದ್ಧಾಂತದ ಪ್ರಕಾರ ಎಲ್ಲವೂ ಒಂದಕ್ಕೊಂದು ಸಂಬಂಧಿಸಿವೆ. ಈ ಸಂಬಂಧದ ದೃಷ್ಟಿಯಿಂದ, ಹೊರಗಿನ ವಂಚಿತರಾದವರ ವಿಷಯದಲ್ಲಿ ನಮ್ಮ ನೈತಿಕ ಹೊಣೆ ಅತ್ಯಂತ ಗಣನೀಯವಾದುದು. ನಮ್ಮ ನೈತಿಕ ಮನೋಭಾವದಲ್ಲಿಯೇ ಕ್ರಾಂತಿಕಾರಿ ಬದಲಾವಣೆ ಆಗಬೇಕಾಗಿದೆ. ಯಾಂತ್ರಿಕ ದೃಷ್ಟಿಯಿಂದ ಇನ್ನೊಬ್ಬ ವ್ಯಕ್ತಿಯನ್ನು ನನಗಿಂತ ಬೇರೆಯವನು ಎಂದು ಭಾವಿಸಿ ದರೆ, ನನಗೂ ಅವನಿಗೂ ಇರಬಹುದಾದ ನಿಕಟ ಸಂಬಂಧ 'ಅವನು ನನಗೆ ಸೇರಿದವನು' ಎಂದಷ್ಟೇ ಆಗಿರುತ್ತದೆ. ಆದರೆ ಕ್ವಾಂಟಮ್ ಸಮಾಜದಲ್ಲಿ ಅವನು ನನಗೆ ಸೇರಿದವನು ಮಾತ್ರ ವಲ್ಲ, ನಾನೇ ಅವನು." ಆದ್ದರಿಂದ ಇತರರನ್ನು ನೋಯಿಸಿದರೆ ನನ್ನನ್ನೇ ನೋಯಿಸಿಕೊಂಡಂತೆ, ಇತರರನ್ನು ನಿಂದಿಸಿದರೆ ನನ್ನನ್ನೇ ನಿಂದಿಸಿಕೊಂಡಂತೆ. ಆದ್ದರಿಂದ ಜಗದ್ಧಿತ ಅನಿವಾರ್ಯ.

> ಪ್ರೀತಿ, ಸದ್ಗುಣ ಮತ್ತು ಪಾವಿತ್ರ್ಯದಲ್ಲಿ ನಾವು ಮುಂದು ವರಿದಂತೆ ಬಾಹ್ಯದಲ್ಲಿಯೂ ಅವನ್ನೇ ನೋಡುತ್ತೇವೆ.
>
> —ಸ್ವಾಮಿ ವಿವೇಕಾನಂದ

ನಾನು ಪೂರ್ಣದೊಡನೆ ಸಂಪೂರ್ಣ ಒಂದಾಗಿದ್ದರೆ ವ್ಯಕ್ತಿ ವೈಶಿಷ್ಟ್ಯವೆಂಬುದು ಇಲ್ಲವೇ ಎಂಬ ಪ್ರಶ್ನೆ ಬರುತ್ತದೆ. ಆ ವ್ಯಕ್ತಿ ವೈಶಿಷ್ಟ್ಯ ಇರುವುದೂ ಪೂರ್ಣದ ಒಂದು ಭಾಗವಾಗಿಯೇ. ಕಣ್ಣು ಕಿವಿ ಮುಂತಾದ ಅಂಗಗಳಿಗೆ ತಮ್ಮದೇ ಆದ ವೈಶಿಷ್ಟ್ಯವಿದ್ದರೂ ಅವು ಗಳ ಕಾರ್ಯಗಳೆಲ್ಲವೂ ಪೂರ್ಣದೇಹಕ್ಕಾಗಿಯೇ ಇರುವುದು. ಕಣ್ಣು ತನಗಾಗಿ ನೋಡುವುದಿಲ್ಲ, ಕಿವಿ ತನಗಾಗಿ ಕೇಳುವುದಿಲ್ಲ, ಹೃದಯ ತನಗಾಗಿ ರಕ್ತ ವಿತರಣೆ ಮಾಡುವುದಿಲ್ಲ, ಹಾಗೆಯೇ ಇತರ ಅಂಗಗಳೂ ಕೂಡ. ಇದೇ ಇಡೀ ವಿಶ್ವಕ್ಕೂ ಅನ್ವಯಿಸು ತ್ತದೆ. ಆದರೆ ಕಣ್ಣು, ಕಿವಿ ಮುಂತಾದ ಅಂಗಗಳೂ ಆರೋಗ್ಯವಂತ ವಾಗಿರಬೇಕು, ಪ್ರತ್ಯೇಕವಾಗಿ ಅವುಗಳನ್ನು ನೋಡಿಕೊಳ್ಳುವುದೂ ಆವಶ್ಯಕ. ಹಾಗೆಯೇ ವೈಯಕ್ತಿಕ ಹಿತವನ್ನೂ ನಾವು ಕಡೆ ಗಣಿಸುವಂತಿಲ್ಲ. ಪ್ರತಿಯೊಬ್ಬ ವ್ಯಕ್ತಿಯೂ ಆತ್ಮೋನ್ನತಿಗಾಗಿ ಶ್ರಮಿಸಬೇಕು, ಸಾಧನೆ ಮಾಡಬೇಕು. ಆದ್ದರಿಂದಲೇ ಸ್ವಾಮಿ ವಿವೇಕಾನಂದರು **ಆತ್ಮನೋ ಮೋಕ್ಷಾರ್ಥಂ ಜಗದ್ಧಿತಾಯ ಚ** ಎಂಬ ಮಂತ್ರವನ್ನು ನಮಗೆ ನೀಡಿದರು.

ಹೀಗೆ ಯಾವುದೇ ದೃಷ್ಟಿಯಿಂದ ನೋಡಿದರೂ ಈ ಮಹಾ ಮಂತ್ರವು ಆಧುನಿಕ ಸಾಮಾಜಿಕ ಪರಿಸ್ಥಿತಿಗೆ, ಜಾಗತೀಕರಣದ ಇಂದಿನ ಸನ್ನಿವೇಶದಲ್ಲಿ, ಚಿಂತನಾಕ್ಷೇತ್ರದಲ್ಲಿ ಆಗುತ್ತಿರುವ ಬದ ಲಾವಣೆಗೆ ಅನುಗುಣವಾಗಿ, ಹೆಚ್ಚು ಸೂಕ್ತವೂ ಅನಿವಾರ್ಯವೂ ಆಗಿ ಕಂಡುಬರುತ್ತದೆ.